# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

***ಎಸ್.ಸಿ.*** **251/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** ಶ್ರೀ ಮಹೇಶ | | ***ಪ್ರಮಾಣ ಮಾಡಿಸಿದ ದಿನಾಂಕ:*** |
| **ತಂದೆ/ಗಂಡನ ಹೆಸರು** | **:** ಶ್ರೀ ಮಹಾಲಿಂಗಪ್ಪ | | **30.08.2024** |
| **ವಯಸ್ಸು** | **:** **35** **ವರ್ಷ** | | |
| **ವೃತ್ತಿ** | **:** ವ್ಯವಸಾಯ | **ಪ್ರಾ.ಸಾ.** | **:** **18** |
| **ವಾಸಸ್ಥಳ** | **:** ಗೌಡರಹುಂಡಿ | **ಚಾ.ಸಾ.** | **:** **23** |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ:**

*.* ಮೃತ ಶಿವರಾಜಪ್ಪನ ಪರಿಚಯ ಇದೆ. ಶಿವರಾಜಪ್ಪ ಇವರ ಮಕ್ಕಳ ಪರಿಚಯ ಇದೆ. ಕೋರ್ಟ್ ಮುಂದೆ ಇರುವ *1* ಮತ್ತು *2* ನೇ ಆರೋಪಿತರು ನಮ್ಮ ಗ್ರಾಮದವರೇ ಇರುವ ಕಾರಣ ಪರಿಚಯ ಇದೆ. ಶಿವರಾಜಪ್ಪ 4 ವರ್ಷದ ಹಿಂದೆ ಮರಣಹೊಂದಿದ್ದಾರೆ ಆದರೆ ಹೇಗೆ ಮರಣಹೊಂದಿದ್ದಾರೆ ಎಂದು ಗೊತ್ತಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ಶಿವರಾಜಪ್ಪನ ಕೊಲೆಯಾಗಿದೆ ಎಂದು ಬೇರೆಯವರು ಹೇಳಿದ್ದರಿಂದ ಗೊತ್ತಾಗಿದೆ ಆದರೆ ಯಾರು ಮಾಡಿದ್ದಾರೆ ಎಂದು ಗೊತ್ತಿಲ್ಲ. ಶಿವರಾಜಪ್ಪ ಇವರು ಕಾಣೆಯಾಗಿದ್ದ ದಿನ ನಾನು ಮತ್ತು ನನ್ನ ಸ್ನೇಹಿತ ಚಾ.ಸಾ–22 ಸಿದ್ದಲಿಂಗಸ್ವಾಮಿ ನಮ್ಮ ಟ್ರಾಕ್ಟರ್ ಬಾಡಿಗೆ ಹಣ ಪಡೆಯಲು ಅಹಲ್ಯಾ ಗ್ರಾಮಕ್ಕೆ ಹೋಗಿದ್ದೆವು ಆ ಕಾಲಕ್ಕೆ ನಾನು ಮತ್ತು ಸಿದ್ದಲಿಂಗಸ್ವಾಮಿ ಅಹಲ್ಯಾ ಗ್ರಾಮದ ಹೋಟೆಲ್ ಬಳಿ ನಿಂತಿದ್ದಾಗ 1 ನೇ ಆರೋಪಿತ ಟ್ರಾಕ್ಟರ್ ನಲ್ಲಿ ಶರತ್ ಕುಮಾರ್ ಮತ್ತು ಇನ್ನೊಬ್ಬ ವ್ಯಕ್ತಿ ಗೌಡರಹುಂಡಿಯಿಂದ ಅಹಲ್ಯಾ

ಗ್ರಾಮದ ಕಡೆಗೆ ಹೋಗಿದ್ದರು. ನಂತರ ಶರತ್ ಕುಮಾರ ಒಬ್ಬರೇ ಟ್ರಾಕ್ಟರ್ ನಲ್ಲಿ ವಾಪಸ್ಸು ಗೌಡರಹುಂಡಿ ಕಡೆಗೆ ಬಂದಿದ್ದರು. ಆ ನಂತರ ಪುನಃ ಯಾವತ್ತು ನನ್ನನ್ನು ಪೋಲೀಸ್ ಠಾಣೆಗೆ ಕರೆಸಿ 1 ಮತ್ತು 3 ನೇ ಆರೋಪಿತರನ್ನು ತೋರಿಸಿಲ್ಲ. ಆ ದಿನ ಶರತ್ ಕುಮಾರ್ ಹೋಗಿದ್ದ ಟ್ರಾಕ್ಟರ್ ಅನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ನಿ.ಪಿ–13 ರಿಂದ 17 ಎಂದು ಗುರುತಿಸಿರುವ ಪೊಟೋಗಳಲ್ಲಿ ಕಾಣುವ ಟ್ರಾಕ್ಟರ್ ಮತ್ತು ಟ್ರೇಲರ್ ಅವೇ ಇರುತ್ತವೆ. ಶಿವರಾಜಪ್ಪ ಹೇಗೆ ತೀರಿಕೊಂಡಿದ್ದರು ಮತ್ತು ಅವರಿಗೆ ಯಾರು ಏನು ಮಾಡಿದ್ದರು ಎಂದು ಗೊತ್ತಿಲ್ಲ. ನಂಜನಗೂಡು ನ್ಯಾಯಾಧೀಶರ ಮುಂದೆ ಸಹ ಇದೇ ರೀತಿ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ದಾಖಲೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿ.ಪಿ–46 ಮತ್ತು ಸಹಿಯನ್ನು ನಿ.ಪಿ–46(ಎ) ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*09.06.2021* ರಂದು ನನ್ನನ್ನು ಹುಲ್ಲಹಳ್ಳಿ ಪೋಲೀಸ್ ಠಾಣೆಗೆ ಕರೆಸಿದಾಗ ಈ ಪ್ರಕರಣದ *1* ಮತ್ತು *3* ನೇ ಆರೋಪಿತರನ್ನು ನನಗೆ ತೋರಿಸಿದ್ದರು ಮತ್ತು ಅವರೇ ದಿಃ*28.05.2021* ರಂದು ಟ್ರಾಕ್ಟರ್ ನಲ್ಲಿ ಹೊಗುತ್ತಿದ್ದ ವ್ಯಕ್ತಿಗಳು ಎಂದು ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. *1* ಮತ್ತು *2* ನೇ ಆರೋಪಿತರು ಸಂಚು ಮಾಡಿ ಶಿವರಾಜಪ್ಪನನ್ನು ಕೊಲೆ ಮಾಡಿ ಆ ಟ್ರಾಕ್ಟರ್ ನಲ್ಲಿ ಹೆಣವನ್ನು *1* ಮತ್ತು *3* ನೇ ಆರೋಪಿತರು ಸಾಗಿಸಿ ನಾಲೆಗೆ ಬಿಸಾಕಿರುತ್ತಾರೆ ಎಂದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ಈ ದಿನ ನಂಜನಗೂಡು

--------- ಗುರುತಿಸುತ್ತೇನೆ ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-47 ಎಂದು ಗುರುತಿಸಿದೆ. ನಂಜನಗೂಡು ನ್ಯಾಯಾಧೀಶರ ಮುಂದೆ ನಿ.ಪಿ-46 ರಂತೆ ಹೇಳಿಕೆ ಕೊಟ್ಟಿದ್ದೆ ಎಂದರೆ ಅಹಲ್ಯಾ ಗ್ರಾಮಕ್ಕೆ ಹೋದಾಗ ನೋಡಿದ್ದನ್ನು ಹೇಳಿದ್ದೇನೆ. ಆರೋಪಿತರು ನಮ್ಮ ಗ್ರಾಮದವರೇ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-</u>

3. ಶಿವರಾಜಪ್ಪನ ಮಗ ಮತ್ತು ಸ್ನೇಹಿತರು ಎಂದರೆ ನಿಜ. ನಾವು ಸಂಬಂಧಿಗಳು ಸಹ ಇರುತ್ತೇವೆ. ನಾನು ಅಹಲ್ಯಾ ಗ್ರಾಮಕ್ಕೆ ಹೊಗುವ ಮೊದಲು ಶಿವರಾಜಪ್ಪ ಕಾಣೆಯಾಗಿದ್ದ ಬಗ್ಗೆ ನನಗೆ ಗೊತ್ತಿರಲಿಲ್ಲ. ಆ ರೀತಿ ಕಾಣೆಯಾಗಿದ್ದ ಬಗ್ಗೆ ಮರುದಿನ ಬೆಳಗ್ಗೆ ನನಗೆ ಗೊತ್ತಾಗಿತ್ತು. ನಾನು ಪೋಲೀಸ್ ಠಾಣೆಯಲ್ಲಿ ಶರತ್ ಕುಮಾರ್ ನನ್ನು ಅಹಲ್ಯಾ ಗ್ರಾಮದಲ್ಲಿ ನೋಡಿದ್ದೆ ಎಂದು ಗುರುತಿಸಿಲ್ಲ. ನಾನು ಶಿವರಾಜಪ್ಪನನ್ನು ಹುಡುಕುವ ಸಲುವಾಗಿ ಅವರ ಮನೆಯವರಿಗೆ ಸಹಾಯ ಮಾಡಿಲ್ಲ. 1 ನೇ ಆರೋಪಿತ ಟ್ರಾಕ್ಟರ್ ನಲ್ಲಿ ಜಮೀನು ಉಳುಮೆ ಮಾಡುತ್ತಾರೆ ಎಂದರೆ ನಿಜ. ವ್ಯವಸಾಯಕ್ಕೆ ಸಂಬಂದಪಟ್ಟಂತೆ ಅದೇ ಟ್ರಾಕ್ಟರ್ ನಲ್ಲಿ ಬೇರೆ ಗ್ರಾಮಕ್ಕೆ ಹೊಗುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಿವರಾಜಪ್ಪ ಮರಣಹೊಂದುವ 6-7 ವರ್ಷಗಳ ಮೊದಲಿನಿಂದಲೂ 1 ನೇ ಆರೋಪಿತರ ಬಳಿ ಟ್ರಾಕ್ಟರ್ ಇತ್ತು. ನಾನು ಅಹಲ್ಯಾ ಗ್ರಾಮಕ್ಕೆ ಹೊಗುವ ಮೊದಲು ಶರತ್ ಕುಮಾರ ಮತ್ತು ಶಿವರಾಜಪ್ಪ ಒಟ್ಟಿಗೆ ಇದುದ್ದನ್ನು ನೋಡಿಲ್ಲ. ನಾವು ಆ ಹೋಟೆಲ್ ಬಳಿ ನಿಂತಾಗ ಕತ್ತಲಾಗಿತ್ತು ಎಂದರೆ ನಿಜ. ಆ ಕಾಲಕ್ಕೆ ಓಡಾಡುವ ವಾಹನಗಳಲ್ಲಿ ಹೊಗುವವರೂ ಕಾಣುತ್ತಿರಲಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಎದುರುಗಡೆ ವಾಹನ ಬಂದಾಗ ಕಾಣುತ್ತಿತ್ತು. ಆ ದಿನ

ನಾನು ಶರತ್ ಕುಮಾರ್ ಅವರನ್ನು ಮಾತನಾಡಿಸಿಲ್ಲ. ನಾನು ಆ ದಿನ ಶರತ್ ಕುಮಾರ್ ಇವರನ್ನು ನೋಡೇ ಇಲ್ಲ ಎಂದರೆ ಸರಿಯಲ್ಲ. ಪವನ್ ಕುಮಾರ್ ನನ್ನ ಸ್ನೇಹಿತ ಇರುವ ಕಾರಣ ಆತನ ಹೇಳಿಕೆಯಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದಿಂದ ಅಹಲ್ಯಾ ಗ್ರಾಮಕ್ಕೆ ಟ್ರಾಕ್ಟರ್ ನಲ್ಲಿ ಹೊಗಲು *5–10* ನಿಮಿಷ ಬೇಕಾಗುತ್ತದೆ. ಆ ದಿನ ನಾವು ಅಹಲ್ಯಾ ಗ್ರಾಮದಲ್ಲಿ ನಂತರ ಹೋಟೆಲ್ ಬಳಿ ಹೊಗಿದ್ದೆವು. ಆ ಟೀ ಹೋಟೆಲ್ ಮಾಲೀಕರು ಅಹಲ್ಯಾ ಗ್ರಾಮದವರು. ನನಗೆ ಅವರ ಪರಿಚಯ ಇಲ್ಲ. ಆ ದಿನ ನಾವು ಅಹಲ್ಯಾ ಗ್ರಾಮಕ್ಕೆ ಹೋಗಿದ್ದನ್ನು ಬೇರೆ ಯಾರು ನೋಡಿಲ್ಲ.

**ಪಾಟೀ ಸವಾಲು *3* ನೇ ಆರೋಪಿತರ ಪರ ಇಲ್ಲ**

**_2_ ನೇ ಆರೋಪಿತರ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ**

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*